# ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಹೊಸನಗರ

## ಸಿ ಸಿ ನಂ.952/2026

ಫಿರ್ಯಾದಿಃ ರಿಪ್ಪನಪೇಟೆ ಪೋಲಿಸ್ ಠಾಣೆ

ವಿರುದ್ಧ

ಆರೋಪಿಃ 3. ನಾಗರಾಜ್ ಹೆಚ್.ಬಿ. ತಂದೆಃ ಹುಚ್ಚಪ್ಪ
ವಯಸ್ಸುಃ 35 ವರ್ಷ,
ವಾಸಃ ಕುಂಬಾರಗುಂಡಿ, ಶಿಕಾರಿಪುರ ಟೌನ್,
ಶಿಕಾರಿಪುರ ತಾಲ್ಲೂಕು

## ಆರೋಪಣೆ

ದಿಃ 14-01-2026 ರಂದು ಸಂಜೆ 06-10 ಗಂಟೆ ಸಮಯದಲ್ಲಿ ಹೊಸನಗರ ತಾಲ್ಲೂಕು ರಿಪ್ಪನಪೇಟೆ ಪೋಲಿಸ್ ಠಾಣಾ ವ್ಯಾಪ್ತಿಯ ಬಾಳೂರು ಗ್ರಾಮದ ವಡಗೆರೆ ಕೆರೆಯ ದಂಡೆಯ ಮೇಲೆ ಹಾದು ಹೋಗಿರುವ ರಿಪ್ಪನಪೇಟೆ-ಯಡೇಹಳ್ಳಿ, ಆನಂದಪುರ ಎಸ್-ಹೆಚ್-01 ಮುಖ್ಯ ರಸ್ತೆಯಲ್ಲಿ ವಡಗೆರೆ ಗಣೇಶ್ ಸಿಂಗ್ ಬಿನ್ ಮಂಜುಸಿಂಗ್ ರವರ ಮನೆಯ ಮುಂದಿನ ಟಾರ್ ರಸ್ತೆಯಲ್ಲಿ 3 ನೇ ಆರೋಪಿಯಾದ ನೀವು ನಿಮ್ಮ ಕೆಎ-15-ಇಸಿ-5198 ನೇ ನಂಬರಿನ ಬಜಾಜ್ ಪಲ್ಸರ್ ಬೈಕಿನಲ್ಲಿ ಈ ಪ್ರಕರಣದ ಮೃತೆ ಅಮೃತಾ ಮತ್ತು ಅವರ ಇಬ್ಬರು ಮಕ್ಕಳನ್ನು ಕೂರಿಸಿಕೊಂಡು ಬೈಕನ್ನು ಆನಂದಪುರ ಕಡೆಯಿಂದ ರಿಪ್ಪನಪೇಟೆ ಕಡೆಗೆ ಚಲಾಯಿಸಿಕೊಂಡು ಹೋಗುತ್ತಿದ್ದು, 1 ನೇ ಆರೋಪಿಯು 2 ನೇ ಆರೋಪಿಗೆ ಸೇರಿದ ಕೆಎ-66-4571 ರ ನೊಂದಣಿ ಸಂಖ್ಯೆಯ ಚಾಸ್ಸಿ ನಂ.ಎಂಇಎಸ್‌ಟಿಐಟಿಟಿ 52024 ಎಎ 254 ರ ಟ್ರೈಲರ್ ಅಳವಡಿಸಿದ್ದ ಟ್ರ್ಯಾಕ್ಟರ್ ನ್ನು ಆನಂದಪುರ ಕಡೆಯಿಂದ ರಿಪ್ಪನಪೇಟೆ ಕಡೆಗೆ ಬರಲು ದುಡುಕು ಮತ್ತು ನಿರ್ಲಕ್ಷತೆಯಿಂದ ಮಾನವ ಜೀವಕ್ಕೆ ಹಾನಿಯುಂಟಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬರುತ್ತಿದ್ದವನು ರಸ್ತೆಯಲ್ಲಿ ತನಗಿಂತ ಮುಂದೆ ಹೋಗುತ್ತಿದ್ದ ನಿಮ್ಮ ಬೈಕಿಗೆ ಹಿಂಬದಿಯಿಂದ ಡಿಕ್ಕಿ ಹೊಡೆಸಿದ್ದರಿಂದ ಅಪಘಾತವಾಗಿದ್ದು ಆ ಮೂಲಕ ಭಾ.ನಾ.ದಂ.ಸಂ. ಕಲಂ ಕಲಂ 281 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಹಾಗೂ ಅದು ನನ್ನ ಸಂಜ್ಞೆಯಲ್ಲಿ ಇರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 3 ನೇ ಆರೋಪಿಯಾದ ನೀವು ಕೆಎ-15-ಇಸಿ-5198 ನಂಬರಿನ ಬಜಾಜ್ ಪಲ್ಸರ್ ಬೈಕಿಗೆ ವಿಮಾ ಪಾಲಿಸಿಯನ್ನು ನವೀಕರಣ ಮಾಡಿಸದೇ ಸಾರ್ವಜನಿಕ ರಸ್ತೆಯಲ್ಲಿ ಚಲಾಯಿಸಿಕೊಂಡು ಬಂದು ಆ

ಮೂಲಕ 196 ಐಎಂವಿ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಹಾಗೂ ಅದು ನನ್ನ ಸಂಜ್ಞೆಯಲ್ಲಿ ಇರುತ್ತದೆ.

ಈ ಮೇಲ್ಕಂಡ ಆರೋಪಣೆ ಯನ್ನು ನಿಮ್ಮ ಮೇಲೆ ಮಾಡಲು ನಾನು ಬದ್ಧನಾಗಿರುತ್ತೇನೆ.

ಪ್ರಶ್ನೆ: ಈಗ ಮೇಲೆ ಓದಿ ಹೇಳಿದ ನಿಮ್ಮ ಮೇಲಿನ ಆರೋಪವನ್ನು ಒಪ್ಪಿಕೊಳ್ಳುವಿಯೋ? ಅಥವಾ ವಿಚಾರಣೆಯಾಗಬಯಸುವೆಯೋ?

ಉತ್ತರ:

ಈ ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ 1 ನೇ ಆರೋಪಿಗೆ ಓದಿ ಹೇಳಿ ಕೇಳಲಾಗಿ ಅವರು ನೀಡಿದ ಉತ್ತರವನ್ನು ನನ್ನ ಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು.

ದಿನಾಂಕ 17-08-2026.

(ಶ್ರೀ ಫಾರೂಖ ಝಾರೆ )
ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಹೊಸನಗರ

ಆರೋಪಿಯ ಸಹಿ: